## 2017 ಕ.ತೀ.ವ. 987

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ, ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳು ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ ನಾಗರತ್ನ

### ಮೆ॥ ರಾಜೇಶ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ –ವಿರುದ್ಧ– ಅಧ್ಯಕ್ಷರು, ಅಬಕಾರಿ ಮತ್ತು ಸೀಮಾಸುಂಕಗಳ ಕೇಂದ್ರ ಮಂಡಳಿ, ನವದೆಹಲಿ ಮತ್ತು ಇನ್ನೊಬ್ಬರು*

ಕರ್ನಾಟಕ ಉಚ್ಚ ನ್ಯಾಯಾಲಯಗಳ ಕಾಯಿದೆ ಕಲಂ 4 ರಡಿಯಲ್ಲಿ ರಿಟ್ ಮೇಲ್ಮನವಿ.

ರಿಟ್ ಅರ್ಜಿದಾರರು ಚಿನ್ನದ ಆಭರಣಗಳನ್ನು ಹಾಗೂ ಚಿನ್ನದ ಉತ್ಪನ್ನಗಳನ್ನು ಆಮದು – ರಫ್ತು ಮಾಡುವ ವ್ಯಾಪಾರದಲ್ಲಿ ನಿರತರಾಗಿದ್ದು ಅವರು ಆಮದು ಮಾಡಿಕೊಂಡ ಚಿನ್ನದ ಗಣಿಗಾರಿಕೆ ಕಂಪನಿಯ ಪ್ಯಾಕಿಂಗ್ ಪಟ್ಟಿಯನ್ನು ತಾಕೀತು ಮಾಡಿದ ಸೀಮಾಸುಂಕ ಅಧಿಕಾರಿಗಳ ಕ್ರಮವನ್ನು ರಿಟ್ ಅರ್ಜಿ ಸಲ್ಲಿಸುವ ಮೂಲಕ ಪ್ರಶ್ನಿಸಲಾಗಿ ರಿಟ್ ಅರ್ಜಿಯು ವಜಾಗೊಳಿಸಲ್ಪಡುತ್ತದೆ. ಏಕಸದಸ್ಯ ಪೀಠದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಮೇಲ್ಮನವಿ.

ಅರ್ಜಿದಾರರು ದಿನಾಂಕ 18ನೇ ಜೂನ್ 2013 ರಂದು ಬೆಂಗಳೂರಿನಲ್ಲಿ ಎದುರುದಾರರು ನೀಡಿದ ನೋಟಿಸನ್ನು ಪ್ರಶ್ನಿಸಿ ರಿಟ್ ಅರ್ಜಿಯನ್ನು ಸಲ್ಲಿಸಿರುವುದರಿಂದ ಅವರಿಗೆ ರಿಟ್ ಅರ್ಜಿಯನ್ನು ಸಲ್ಲಿಸುವ ಅಧಿಕಾರವ್ಯಾಪ್ತಿಯಿರುತ್ತದೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ಸದರಿ ರಿಟ್ ಮೇಲ್ಮನವಿಯನ್ನು ಪುರಸ್ಕರಿಸಿದೆ.

* ರಿಟ್ ಅಪೀಲು ಸಂಖ್ಯೆ.: 1482/2015 (ಟಿ–ಟಿಎಆರ್), ದಿನಾಂಕ: 10ನೇ ಜುಲೈ, 2015.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *(1994) 4 ಸ.ನ್ಯಾ.ಪ್ರ. 711*
*ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮೀಷನ್*
*–ವಿರುದ್ಧ– ಉತ್‍ಪಾಲ್ ಕುಮಾರ್ ಬಸು* *(ಉಲ್ಲೇ) 1*

2. *ಎಐಆರ್ 1953 ಎಸ್‍ಸಿ 210*
*ಚುನಾವಣಾ ಆಯುಕ್ತರು, ಭಾರತ ಸರ್ಕಾರ*
*–ವಿರುದ್ಧ– ಸಕಾ ವೆಂಕಟರಾವ್* *(ಉಲ್ಲೇ) 4*

3. *(2006) 6 ಸ.ನ್ಯಾ.ಪ್ರ. 207*
*ಓಂ ಪ್ರಕಾಶ್ ಶ್ರೀವಾಸ್ತವ –ವಿರುದ್ಧ–*
*ಭಾರತ ಸರ್ಕಾರ ಮತ್ತು ಇನ್ನೊಬ್ಬರು* *(ಉಲ್ಲೇ) 6*

4. *(2004) 6 ಸ.ನ್ಯಾ.ಪ್ರ. 254*
*ಕುಸುಮ್ ಇನ್‍ಗಾಟ್ಸ್ ಮತ್ತು ಅಲಾಯ್ ಲಿಮಿಟೆಡ್*
*–ವಿರುದ್ಧ– ಭಾರತ ಸರ್ಕಾರ ಮತ್ತು ಇನ್ನೊಬ್ಬರು* *(ಉಲ್ಲೇ) 7*

5. *(2000) 7 ಸ.ನ್ಯಾ.ಪ್ರ. 640*
*ನವೀನ್ ಚಂದ್ರ ಎನ್. ಮಜಿತಿಯಾ –ವಿರುದ್ಧ–*
*ಮಹಾರಾಷ್ಟ್ರ ಸರ್ಕಾರ ಮತ್ತು ಇತರರು* *(ಉಲ್ಲೇ) 8*

ಅಪೀಲುದಾರರ ಪರ : ಶ್ರೀ ಕಿರಣ್ ಎಸ್. ಜವಳಿ, ವಕೀಲರು.
ಪ್ರತ್ಯಪೀಲುದಾರರ ಪರ : ಶ್ರೀ ವೈ. ಹರಿಪ್ರಸಾದ್, ವಕೀಲರು.

## ತೀರ್ಪು

**ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ:**

ರಿಟ್ ಅರ್ಜಿ ಸಂ. 31835/2013 ರಲ್ಲಿ ಈ ನ್ಯಾಯಾಲಯದ ಸನ್ಮಾನ್ಯ ಏಕಸದಸ್ಯ ಪೀಠದ ನ್ಯಾಯಮೂರ್ತಿಗಳು ಮಾಡಿದ ತೀರ್ಪು ಮತ್ತು ಆದೇಶ ದಿನಾಂಕ ಮಾರ್ಚ್ 18, 2015 ರ ವಿರುದ್ಧ ರಿಟ್ ಅರ್ಜಿದಾರನಿಂದ ಈ ಅಪೀಲನ್ನು ಹೂಡಲಾಗಿದೆ. ಪ್ರಶ್ನಿತ ಆದೇಶದ ಮೂಲಕ ಮಾನ್ಯ ನ್ಯಾಯಮೂರ್ತಿಯವರು, ***ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮೀಷನ್ –ವಿರುದ್ಧ– ಉತ್‌ಪಾಲ್ ಕುಮಾರ್ ಬಸು*** [1] ರ ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಮೇಲೆ ಅವಲಂಬಿಸಿದ್ದು, ಮತ್ತು ಕೇವಲ ನೋಂದಾಯಿತ ಕಚೇರಿಯ ಸ್ಥಳ ಅಥವಾ ಪತ್ರವ್ಯವಹಾರದ ಸ್ವೀಕಾರವನ್ನು ವ್ಯಾಜ್ಯ ಕಾರಣಕ್ಕಾಗಿ ಅವಕಾಶ ನೀಡದೆ, ಭಾರತ ಸಂವಿಧಾನದ 226 ನೇ ಅನುಚ್ಛೇಧದ ಅಡಿಯಲ್ಲಿ ಈ ಅರ್ಜಿಯನ್ನು ವಜಾಗೊಳಿಸಲಾಗಿದೆಯೆಂದು ಅಭಿಪ್ರಾಯಪಟ್ಟಿದೆ. ರವಾನಿತ ಸರಕನ್ನು ದೆಹಲಿ ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ಸ್ವೀಕರಿಸಲಾಗಿದೆ ಮತ್ತು ರಿಟ್ ಅರ್ಜಿದಾರನು ಸದರಿ ರವಾನಿಸಿದ ಸರಕನ್ನು ದೆಹಲಿಯಲ್ಲಿ ವಶಾವಣೆಗೆ ತೆಗೆದುಕೊಂಡಿದ್ದಾನೆ ಹಾಗೂ ಉತ್ತರಾಖಂಡಕ್ಕೆ ಸಾಗಿಸಲಾಗಿದೆ. ವ್ಯಾಜ್ಯಕಾರಣವು ಪೂರ್ಣವಾಗಿ ಅಥವಾ ಭಾಗಶಃವಾಗಿಯಾಗಲಿ, ಈ ರಿಟ್ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಈ ನ್ಯಾಯಾಲಯ ಸಮರ್ಥಗೊಳಿಸುವಂತೆ ಈ ನ್ಯಾಯಾಲಯದ ಪ್ರಾದೇಶಿಕ ಅಧಿಕಾರವ್ಯಾಪ್ತಿಯೊಳಗೆ ಉದ್ಭವಿಸುವುದಿಲ್ಲವೆಂದು ಮಾನ್ಯ ನ್ಯಾಯಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.

2. ಈ ರಿಟ್ ಅರ್ಜಿಯನ್ನು ದಾಖಲು ಮಾಡುವುದಕ್ಕೆ ಪ್ರಮುಖವಾದ ಸಂಗತಿಗಳು ಈ ಕೆಳಗಿನಂತೆ ಸಂಕ್ಷಿಪ್ತವಾಗಿದೆ:

ಎ) ರಿಟ್ ಅರ್ಜಿದಾರನು, ಚಿನ್ನಾಭರಣ ಮತ್ತು ಚಿನ್ನ ಉತ್ಪನ್ನಗಳ ತಯಾರಿಕೆ ಮತ್ತು ರಫ್ತು ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾನೆ. ಅವರು ವಿದೇಶೀ ವ್ಯಾಪಾರ

1. (1994) 4 ಸ.ನ್ಯಾ.ಪ್ರ. 711

(ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮದ ಅಡಿಯಲ್ಲಿ ಆಮದು–ರಫ್ತು ಕೋಡ್ ಅನ್ನು ಹೊಂದಿದ್ದಾನೆ. ಸದರಿ ಆಮದು–ರಫ್ತು ಕೋಡ್ ಅನ್ನು ಉಪಯೋಗಿಸಿಕೊಂಡು ರಿಟ್ ಅರ್ಜಿದಾರನು, ಅದರ ಆಮದು ಮತ್ತು ರಫ್ತು ವ್ಯಾಪಾರ ಮಾಡುತ್ತಿದ್ದಾನೆ.

ಬಿ) ಸೀಮಾ ಸುಂಕಗಳ ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚನೆಗಳಲ್ಲಿ ಹೊರಡಿಸಿರುವ ಷರತ್ತುಗಳನ್ನು ಪಾಲಿಸುವುದಕ್ಕೊಳಪಟ್ಟು, ಸೀಮಾ ಸುಂಕ ಮತ್ತು ಹೆಚ್ಚುವರಿ ಸೀಮಾಸುಂಕಕ್ಕೆ ಅನ್ವಯವಾಗುವ ದರಗಳ ಸಂದಾಯದಿಂದ ವಿನಾಯಿತಿಯ ಪ್ರಯೋಜನ ನೀಡಿ ಅಧಿಸೂಚನೆಗಳನ್ನು ಹೊರಡಿಸುವುದಕ್ಕೆ ಕೇಂದ್ರ ಸರ್ಕಾರವು ಅಧಿಕೃತವಾಗಿದೆ.

ಸಿ) ಅಧಿಸೂಚನೆ ಸಂ.12/2012 ರಲ್ಲಿ ಆಮದು ಉತ್ಪನ್ನಗಳನ್ನು ಅಧಿಕೃತಗೊಳಿಸಿ, ವಿವಿಧ ಅನುಕ್ರಮ ಸಂಖ್ಯೆಗಳ ಅಡಿಯಲ್ಲಿ ಪಟ್ಟಿಮಾಡಿದೆ. ಈ ಅಪೀಲಿನ ಮಿತಿಯ ಉದ್ದೇಶಕ್ಕಾಗಿ ಅನುಕ್ರಮ ಸಂಖ್ಯೆ ಸುಸಂಬದ್ಧವಾಗಿದ್ದು, ಅನುಕ್ರಮ ಸಂ.318, ಚಿನ್ನದ ಅದಿರುಗಟ್ಟಿಗಳ ಆಮದುವಿಗೆ ಸಂಬಂಧಪಟ್ಟಿದೆ (ಶುದ್ಧೀಕರಿಸದ ಚಿನ್ನದ ಗಟ್ಟಿಗಳು) ಕ್ರಮ ಸಂಖ್ಯೆ.318 ನ್ನು ಈ ಕೆಳಗಿನಂತೆ ರೂಪಿಸಿದೆ:

| ಕ್ರ. ಸಂ. | ಅಧ್ಯಾಯ ಅಥವಾ ಶೀರ್ಷಿಕೆ ಅಥವಾ ಉಪ–ಶೀರ್ಷಿಕೆ ಅಥವಾ ಬಾಬಿನ ದರ | ಸರಕುಗಳ ವಿವರಣೆ | ಪ್ರಮಾಣಿತ ದರ | ಹೆಚ್ಚುವರಿ ಸುಂಕ ದರ | ಷರತ್ತು ಸಂ. |
|---|---|---|---|---|---|
| | | xxx | | | |
| 318 | 71 | ಶೇಕಡಾ 95ರಷ್ಟು ಮೀರಿದ ಚಿನ್ನದ ಅಂಶವನ್ನು ಹೊಂದಿದ ಚಿನ್ನ ಅದಿರು ಗಟ್ಟಿ | ಏನೂ ಇಲ್ಲ | 2% | 5 ಮತ್ತು 34 |

ಡಿ) ಸದರಿ ಅಧಿಸೂಚನೆಯ ಷರತ್ತು ಸಂ.5 ಮತ್ತು 34 ನ್ನು ಕೆಳಗಿನಂತೆ ಅದರಲ್ಲಿ ರೂಪಿಸಿದೆ:

**“ಷರತ್ತು ಸಂ.5**

ಸೀಮಾ ಸುಂಕಗಳು (ತೆರಿಗೆ ವಿಧಿಸಬಹುದಾದ ಸರಕುಗಳ ತಯಾರಿಕೆಗಾಗಿ ಸುಂಕ ರಿಯಾಯಿತಿ ದರದಲ್ಲಿ ಸರಕುಗಳ ಆಮದು) ನಿಯಮಗಳು, 1996 ರಲ್ಲಿ ರೂಪಿಸಿದ ಪ್ರಕ್ರಿಯೆಯನ್ನು ಆಮದು ಮಾಡಿಕೊಳ್ಳುವವನು ಅನುಸರಿಸಿದ್ದಲ್ಲಿ.

**ಷರತ್ತು ಸಂ.34**

(ಎ) ಸರಕುಗಳನ್ನು, ಅವುಗಳನ್ನು ಉತ್ಪಾದಿಸಿದ ದೇಶದಿಂದ ನೇರವಾಗಿ ಹಡಗಿನಿಂದ ಸಾಗಿಸಿದ್ದಲ್ಲಿ, ಮತ್ತು ಪ್ರತಿಯೊಂದು ಗಟ್ಟಿಯೂ 5 ಕೆಜಿ ಅಥವಾ ಅದಕ್ಕಿಂತ ಹೆಚ್ಚು ತೂಕವಿದ್ದಲ್ಲಿ.

(ಬಿ) ಅವುಗಳನ್ನು ಉತ್ಪಾದಿಸಿದವರಿಂದ ಸರಕುಗಳನ್ನು, ಗಣಿಕಂಪನಿಯಿಂದ ಹೊರಡಿಸಲಾದ ಪ್ಯಾಕಿಂಗ್ ಪಟ್ಟಿಯ ಅನುಸಾರವಾಗಿ ಆಮದು ಮಾಡಿಕೊಂಡಿದ್ದಲ್ಲಿ;

(ಸಿ) ಅದಿರು ಗಟ್ಟಿಯಲ್ಲಿರುವ ಅಮೂಲ್ಯ ಲೋಹ ಅಂಶವನ್ನು ವಿವರವಾಗಿ ಗಣಿ ಕಂಪನಿ ಅಥವಾ ಅದಕ್ಕೆ ಲಗತ್ತಾದ ಪ್ರಯೋಗಾಲಯ ಮೂಲಕ ನೀಡಲಾದ ಲೋಹ ಪರೀಕ್ಷೆಯ ಪ್ರಮಾಣಪತ್ರವನ್ನು ಸೀಮಾ ಸುಂಕಗಳ ಉಪ ಆಯುಕ್ತರು ಅಥವಾ ಸಂದರ್ಭಾನುಸಾರ ಸೀಮಾ ಸುಂಕಗಳ ಸಹಾಯಕ ಆಯುಕ್ತರ ಮುಂದೆ ಆಮದು ಮಾಡಿಕೊಳ್ಳುವವನು ಹಾಜರುಪಡಿಸಿದ್ದಲ್ಲಿ;

(ಡಿ) ಚಿನ್ನದ ಅದಿರು ಗಟ್ಟಿಗಳನ್ನು 99.5% ಮತ್ತು ಅದಕ್ಕಿಂತ ಹೆಚ್ಚಿನ ಶುದ್ಧತೆಯ ಗುಣಮಟ್ಟದ ಚಿನ್ನದ ಗಟ್ಟಿಗಳನ್ನು ಸಂಸ್ಕರಣೆ ಮಾಡಲು ಮತ್ತು ತಯಾರಿಕೆಯ ಉದ್ದೇಶಕ್ಕಾಗಿ ವಾಸ್ತವಿಕ ಉಪಯೋಗದಾರನಿಂದ ಆಮದು ಮಾಡಿಕೊಂಡಲ್ಲಿ; ಮತ್ತು

(ಇ) ಬೆಳ್ಳಿ ಅದಿರುಗಟ್ಟಿಗಳನ್ನು, 99.9% ಮತ್ತು ಅದಕ್ಕಿಂತ ಹೆಚ್ಚಿನ ಶುದ್ದತೆಯ ಬೆಳ್ಳಿ ಗಟ್ಟಿಗಳ ಸಂಸ್ಕರಣೆ ಮಾಡಲು ಮತ್ತು ತಯಾರಿಕೆಯ ಉದ್ದೇಶಕ್ಕಾಗಿ ವಾಸ್ತವಿಕ ಉಪಯೋಗದಾರನಿಂದ ಆಮದುಮಾಡಿಕೊಂಡಲ್ಲಿ";

(ಇ) ಮೇಲೆ ನಮೂದಿಸಲಾದ ಷರತ್ತು ಸಂಖ್ಯೆ 5 ಮತ್ತು 34 ರಲ್ಲಿ ಹೇಳಲಾದ ಷರತ್ತುಗಳನ್ನು ಪೂರೈಸುವುದರ ಮೂಲಕ ಸದರಿ ಅಧಿಸೂಚನೆ ಕ್ರಮ ಸಂಖ್ಯೆ 318 ರ ಅಡಿಯಲ್ಲಿ ಲಭ್ಯವಿರುವ ರಿಯಾಯಿತಿ ಪಡೆದುಕೊಳ್ಳುವ ಮೂಲಕ ದೆಹಲಿ ಬಂದರಿನಲ್ಲಿ ಚಿನ್ನದ ಅದಿರಿನ ಗಟ್ಟಿಗಳನ್ನು ರಿಟ್ ಅರ್ಜಿದಾರನು ಆಮದು ಮಾಡಿಕೊಂಡಿದ್ದಾನೆ.

(ಎಫ್) ಪ್ರಸಕ್ತ ಸಮಯದಲ್ಲಿ ಸಂಸ್ಕರಿಸಿದ ಶುದ್ಧ ಚಿನ್ನದ ಗಟ್ಟಿಗಳ ವಿದೇಶಿ ಬ್ರಾಂಡೆಡ್‌ನ್ನು ಆಮದು ಮಾಡಿಕೊಳ್ಳುವುದಕ್ಕಾಗಿ ಸಾಮಾನ್ಯ ಸುಂಕ ದರ ಶೇಕಡಾ 4% ಆಗಿದೆ. ಕಚ್ಚಾ ಚಿನ್ನವನ್ನು ಆಮದು ಮಾಡಿಕೊಳ್ಳುವುದಕ್ಕಾಗಿ ಸದರಿ ಅಧಿಸೂಚನೆಯ ಕ್ರಮ ಸಂ.318ರ ಪ್ರಕಾರ ವಿನಾಯಿತಿ ನೀಡಲಾದ ಸುಂಕವು ಶೇಕಡಾ 2 ಮತ್ತು ಅಬಕಾರಿ ಸುಂಕ ಹೆಚ್ಚುವರಿ ಶೇಕಡಾ 1 ಆಗಿದ್ದು, ಅಂಥ ವಿನಾಯಿತಿಯ ಮೇಲೆ ಸಂದಾಯ ಮಾಡಬೇಕಾಗುತ್ತದೆ. ಹೀಗಾಗಿ, ರಿಟ್ ಅರ್ಜಿದಾರನು ಶೇಕಡಾ 3ರಷ್ಟು ಅಬಕಾರಿ ಸುಂಕವನ್ನು ಪಾವತಿಸಿದ್ದಾನೆ. ಸಾಮಾನ್ಯ ಸುಂಕಕ್ಕೆ ಹೋಲಿಸಿದಲ್ಲಿ ಅದು ಶೇಕಡಾ 1 ಕಡಿಮೆ ಸಂದಾಯ ಮಾಡಲಾಗಿದೆ.

(ಜಿ) ಆಸ್ಟ್ರೇಲಿಯಾ ಸಂಸತ್ತಿನ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೋಲ್ಡ್ ಕಾರ್ಪೋರೇಷನ್ ಅಧಿನಿಯಮದ ಮೇರೆಗೆ ಪರ್ತ್‌ಮಿಂಟ್‌ನಿಂದ ಚಿನ್ನ ಅದಿರುಗಟ್ಟಿಗಳನ್ನು ರಿಟ್ ಅರ್ಜಿದಾರನು, ಆಮದು ಮಾಡಿಕೊಂಡಿದ್ದಾನೆ. ಸದರಿ ಮಿಂಟ್, ಪೂರ್ಣವಾಗಿ ವೆಸ್ಟ್ರೇನ್ ಆಸ್ಟ್ರೇಲಿಯ ಸರ್ಕಾರದ ಒಡೆತನದಲ್ಲಿದೆ.

(ಎಚ್) ಸೀಮಾ ಸುಂಕಗಳ ಪ್ರಾಧಿಕಾರವು, ಸರಕುಗಳ ಪಟ್ಟಿ ಮತ್ತು ಸದರಿ ಮಿಂಟ್‌ನಿಂದ ನೀಡಲಾದ ಲೋಹ ಪರೀಕ್ಷೆಯ ಪ್ರಮಾಣ ಪತ್ರ ಸದರಿ ಅಧಿಸೂಚನೆಯಂತೆ ಷರತ್ತುಗಳನ್ನು ಪೂರೈಸಲಾಗಿದೆಯೆ ಎಂಬುದನ್ನು ಸೀಮಾ ಸುಂಕಗಳ ಕೇಂದ್ರ ಮಂಡಲಿಯಿಂದ ಸ್ಪಷ್ಟೀಕರಣ ಕೋರಿದ್ದಾರೆ. ಸೀಮಾ ಸುಂಕಗಳು ಮತ್ತು ಅಬಕಾರಿ ಕೇಂದ್ರ ಮಂಡಲಿಯಿಂದ ಏಪ್ರಿಲ್ 15, 2013 ರಂದು ಸ್ಪಷ್ಟೀಕರಣ ನೀಡಲಾಗಿದೆ. ಸ್ಪಷ್ಟೀಕರಣದ ಸುಸಂಬದ್ಧ ಭಾಗವು ಕೆಳಗಿನಂತಿದೆ:

> ‘‘2. ನಿಮ್ಮ ಪತ್ರದಿಂದ, ಪರ್ತ್‌ಮಿಂಟ್, ಗಣಿ ಕಂಪನಿಯಿಂದ ನೀಡಲಾದ ಪ್ಯಾಕಿಂಗ್ ಪಟ್ಟಿಯ ಅನುಸಾರವಾಗಿ ಪ್ಯಾಕಿಂಗ್ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂಬುದನ್ನು ಗಮನಿಸಲಾಗಿದೆ. ನೀವು, ಆದ್ದರಿಂದ, ಗಣಿ ಕಂಪನಿಯ ಮೂಲಕ ನೀಡಲಾದ ಪ್ಯಾಕಿಂಗ್ ಪಟ್ಟಿಯನ್ನು ಪಡೆದುಕೊಳ್ಳುವುದು, ಮತ್ತು ಹಾಗೂ ಅಧಿಸೂಚನೆ ಷರತ್ತು ಸಂ. 34(ಬಿ)ನ್ನು ಪಾಲಿಸಿರುವ ಬಗ್ಗೆ ನಿಮಗೆ ತೃಪ್ತಿಕರವಾಗಿರುವಂತೆ ಪರ್ತ್‌ಮಿಂಟ್‌ನಿಂದ ನೀಡಲಾದ ಪ್ಯಾಕಿಂಗ್ ಪಟ್ಟಿಯನ್ನು ತುಲನೆ ಮಾಡುವುದರೊಂದಿಗೆ ಪರಿಶೀಲಿಸಬಹುದಾಗಿದೆ.
>
> ‘‘3. ಅದಿರು ಗಟ್ಟಿಯಲ್ಲಿರುವ ವಿವರವಾದ ಅಮೂಲ್ಯ ಲೋಹ ಅಂಶವನ್ನು ಪರ್ತ್‌ಮಿಂಟ್‌ನಿಂದ ನೀಡಲಾದ ಲೋಹ ಪರೀಕ್ಷೆ ಪ್ರಮಾಣ ಪತ್ರಕ್ಕೆ ಸಂಬಂಧಪಟ್ಟಂತೆ, ಈ ಮಿಂಟ್

> ಶೇಕಡಾ 100% ರಷ್ಟನ್ನು ಒಳಗೊಂಡಿದೆ ಮತ್ತು ವೆಸ್ಟರ್ನ್ ಆಸ್ಟ್ರೇಲಿಯಾ ಸರ್ಕಾರದಿಂದ ಹಾಗೂ ಗೋಲ್ಡ್ ಕಾರ್ಪೋರೇಷನ್ ಅಧಿನಿಯಮ, 1987 ರ ಅಡಿಯಲ್ಲಿ ಖಾತರಿ ಪಡಿಸಲಾಗಿದೆ. ಸಂಸತ್ತಿನ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಪರ್ತ್‌ಮಿಂಟ್, ಗಣಿಕಂಪನಿಯಿಂದ ಲಗತ್ತಿಸಲಾದ/ಗೊತ್ತುಪಡಿಸಲಾದ ಪ್ರಯೋಗಾಲಯದಿಂದ ಸಹ ಸ್ಪಷ್ಟೀಕರಿಸಲಾಗಿದೆ. ಅಧಿಸೂಚನೆಯ ಷರತ್ತು ಸಂ. 34(ಸಿ) ಪ್ರಕಾರ, ಗಣಿ ಕಂಪನಿಯು ಲಗತ್ತಿಸಲಾದ ಪ್ರಯೋಗಾಲಯದಿಂದ ನೀಡಲಾದ ಲೋಹ ಪ್ರಮಾಣಪತ್ರವನ್ನು ಅಂಗೀಕರಿಸಬಹುದು."

(ಐ) ಎಲ್ಲಾ ಸುಸಂಬದ್ಧ ದಸ್ತಾವೇಜುಗಳು, ಖರೀದಿ ಪಟ್ಟಿ ಸೇರಿದಂತೆ, ನಮೂದು ಬಿಲ್ಲುಗಳೊಂದಿಗೆ ಪ್ಯಾಕಿಂಗ್ ಪಟ್ಟಿ ಮತ್ತು ಲೋಹ ಪರೀಕ್ಷೆ ಪ್ರಮಾಣ ಪತ್ರವನ್ನು, ಆಮದು ರವಾನೆ ಸರಕುಗಳ ತೀರುವಳಿಗಾಗಿ ಸಲ್ಲಿಸಲಾಗಿದೆ. ಸೀಮಾ ಸುಂಕಾಧಿಕಾರಿಗಳು, ಸ್ವದೇಶದಲ್ಲಿನ ಬಳಕೆಗಾಗಿನ ಆಮದು ಸರಕುಗಳನ್ನು ತೀರುವಳಿ ಮಾಡಿದ್ದಾರೆ.

(ಜೆ) ಸೀಮಾ ಸುಂಕಗಳು ಆಯುಕ್ತರು, ನೋಟೀಸ್ ದಿನಾಂಕ ಮೇ 29, 2013ರ ಮೂಲಕ, ಇತರ ವಿಷಯಗಳ ಜೊತೆಗೆ, ನಿರ್ಣಯದ ನಿರ್ಧರಣೆಗಳ ಸಂಬಂಧದಲ್ಲಿ ಸದರಿ ಮಿಂಟ್‌ನಿಂದ ಚಿನ್ನ ಅದಿರು ಗಟ್ಟಿಗಳನ್ನು ಈ ಹಿಂದೆ ಆಮದು ಮಾಡಿಕೊಂಡ ಸಂಬಂಧದಲ್ಲಿ ಗಣಿ ಕಂಪನಿಯಿಂದ ಪ್ಯಾಕಿಂಗ್ ಪಟ್ಟಿಯನ್ನು ಸಲ್ಲಿಸುವುದಕ್ಕೆ ರಿಟ್ ಅರ್ಜಿದಾರನಿಗೆ, ನಿರ್ದೇಶಿಸಿದ್ದಾರೆ.

(ಕೆ) ರಿಟ್ ಅರ್ಜಿದಾರನು, ತನ್ನ ಪ್ರತ್ಯುತ್ತರದಲ್ಲಿ, ಆಮದು ಮಾಡಿಕೊಂಡಿರುವ ಈ ಹಿಂದಿನ ಈಗಾಗಲೇ ಪೂರ್ಣಗೊಂಡಿರುವ ಆಮದುಗಳ ಬಗ್ಗೆ ಗಣಿ ಕಂಪನಿಯ ಪ್ಯಾಕಿಂಗ್ ಪಟ್ಟಿಯನ್ನು ಸಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೇ, ಸದರಿ ಮಿಂಟ್ ಗಣಿ ಕಂಪನಿಯ ಯಾವುದೇ ವಿವರಗಳನ್ನು ಬಹಿರಂಗ

ಪಡಿಸಲು ಆಸ್ಟ್ರೇಲಿಯಾದ ಗೋಲ್ಡ್ ಕಾರ್ಪೋರೇಷನ್ ಅಧಿನಿಯಮದ, ಅಡಿಯಲ್ಲಿ ಅಂಗೀಕರಿಸುವುದಿಲ್ಲವೆಂದೂ ಸಹಾ ನಿವೇದಿಸಿದ್ದಾರೆ.

(ಎಲ್) ರಿಟ್ ಅರ್ಜಿದಾರನಿಂದ ಹಾಗೇ ಉತ್ತರಿಸಲಾಗಿದ್ದರೂ, ಸೀಮಾ ಸುಂಕ ಆಯುಕ್ತರು, ಜೂನ್ 18, 2013 ರಂದು ಮತ್ತೊಮ್ಮೆ ನೋಟೀಸ್ ನೀಡಿದ್ದು, ಈ ಹಿಂದಿನ ದಾಖಲೆಗಳನ್ನು ಸಲ್ಲಿಸುವುದಕ್ಕೆ ರಿಟ್ ಅರ್ಜಿದಾರನನ್ನು ಮತ್ತೊಮ್ಮೆ ಕೇಳಿದ್ದಾರೆ.

(ಎಂ) ಆಮದನ್ನು, ಗಣಿ ಕಂಪನಿಯ ಪ್ಯಾಕಿಂಗ್ ಪಟ್ಟಿಯ ಮೂಲಕ ಲಗತ್ತಿಸತಕ್ಕದ್ದುಯೆಂದು ಆಜ್ಞಾಪಕವಿಲ್ಲದ ಸದರಿ ಅಧಿಸೂಚನೆಯಾಗಿದೆಯೆಂದು ರಿಟ್ ಅರ್ಜಿದಾರನನ್ನು ಒತ್ತಾಯಪಡಿಸಲಾಗಿದೆ. ಗಣಿ ಕಂಪನಿಯ ಪ್ಯಾಕಿಂಗ್ ಪಟ್ಟಿಯನ್ನು ಹಾಜರುಪಡಿಸಲು ಅಧಿಕಾರಿಗಳು ಒತ್ತಾಯಿಸುತ್ತಿರುವುದು ಕಾನೂನು ಬಾಹಿರವಾಗಿದೆಯೆಂದು ರಿಟ್ ಅರ್ಜಿದಾರನು ವಾದಿಸಿದ್ದಾನೆ.

(ಎನ್) ಆದಾಗ್ಯೂ, ಸೀಮಾ ಸುಂಕ ಅಧಿಕಾರಿಗಳು ಮೇಲೆ ನೀಡಲಾದ ನೋಟೀಸ್‌ಗಳಿಗೆ ಅನುಸಾರವಾಗಿ ಇದ್ದು ರಿಟ್ ಅರ್ಜಿದಾರನ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಬಹುದೆನ್ನುವ ಹೆದರಿಕೆಯ ಕಾರಣದಿಂದಾಗಿ ಈ ರಿಟ್ ಅರ್ಜಿಯನ್ನು, ಈ ನ್ಯಾಯಾಲಯದ ಮುಂದೆ ದಾಖಲು ಮಾಡಲಾಗಿದೆ.

3. ರಿಟ್ ಅರ್ಜಿಯನ್ನು, ಸನ್ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರಿಂದ ಆದೇಶ ದಿನಾಂಕ ಮಾರ್ಚ್ 18, 2015ರ ಮೂಲಕ ವಜಾಗೊಳಿಸಲಾಗಿದೆಯೆಂದು ಮೇಲಿನಂತೆ ನಾವು ವಿವರಿಸಿದ್ದೇವೆ. ಇತರ ವಿಷಯಗಳ ಜೊತೆಗೆ, ಕರ್ನಾಟಕ ಉಚ್ಚ ನ್ಯಾಯಾಲಯ, ಅದರ ಪ್ರಾದೇಶಿಕ ಅಧಿಕಾರವ್ಯಾಪ್ತಿಯೊಳಗೆ ವ್ಯಾಜ್ಯಕಾರಣವು ಉದ್ಭವಿಸಿರದ ಕಾರಣದ ಮೇಲೆ ಈ ರಿಟ್ ಅರ್ಜಿಯನ್ನು ಸಮರ್ಥಿಸಿಕೊಳ್ಳುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟು ಸಮರ್ಥನೀಯತೆಯ ಕಾರಣದ ಮೇಲೆ ಈ ಅರ್ಜಿಯನ್ನು ತಿರಸ್ಕರಿಸಲಾಗಿದೆ.

4. ಭಾರತ ಸಂವಿಧಾನದ 226 ನೇ ಮೂಲ ಅನುಚ್ಛೇಧವು, ***ಚುನಾವಣಾ ಆಯುಕ್ತರು, ಭಾರತ ಸರ್ಕಾರ –ವಿರುದ್ಧ– ಸಕಾ ವೆಂಕಟರಾವ್*** [2] ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ಪರಿಗಣನೆಗಾಗಿ ಬಂದಿದೆ. ಪ್ರತ್ಯರ್ಜಿದಾರನ ಸ್ಥಳವನ್ನು, ಭಾರತ ಸಂವಿಧಾನದ 226 ನೇ ಅನುಚ್ಛೇಧದ ಅಡಿಯಲ್ಲಿ ಉಚ್ಚ ನ್ಯಾಯಾಲಯಗಳಿಗೆ ಪ್ರಾದೇಶಿಕ ಅಧಿಕಾರವ್ಯಾಪ್ತಿಯನ್ನು ನೀಡಲಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಈ ಉದ್ದೇಶಕ್ಕಾಗಿನ ವಸ್ತು ವಿಷಯವನ್ನು ವ್ಯಾಜ್ಯ ಕಾರಣದ ಸ್ಥಿತಿಯೆಂದು ಅಭಿಪ್ರಾಯಪಡಲಾಗಿದೆ. ಸಂವಿಧಾನದ (15ನೇ ತಿದ್ದುಪಡಿ) ಅಧಿನಿಯಮ, 1963ನ್ನು, ಉಚ್ಚ ನ್ಯಾಯಾಲಯ, ಉದ್ಭವಿಸಿದ ವ್ಯಾಜ್ಯಕಾರಣದ ಯಾವ ಅಧಿಕಾರವ್ಯಾಪ್ತಿಯೊಳಗೆ ಪೂರ್ಣವಾಗಿ ಅಥವಾ ಭಾಗಶಃವಾಗಿ ಸಹ ಭಾರತ ಸಂವಿಧಾನದ 226 ನೇ ಅನುಚ್ಛೇಧದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆಯೆಂದು ನೀಡಲಾದ ಖಂಡ (1ಎ)ನ್ನು ಜಾರಿಯಲ್ಲಿ ತರಲಾಗಿದೆ. ತಿದ್ದುಪಡಿಯ ಕಾರಣದಿಂದ, ಸದರಿ ಅನುಚ್ಛೇಧದ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ನೀಡಿದ ಅಧಿಕಾರ ವ್ಯಾಪ್ತಿಗೆ ಹೆಚ್ಚುವರಿಯಾಗಿ ವ್ಯಾಜ್ಯಕಾರಣ ಉಂಟಾಗುವುದನ್ನು ನೀಡಲಾಗಿದೆ. ಖಂಡ (1ಎ) ಸೇರ್ಪಡೆಯೊಂದಿಗೆ, ಉಚ್ಚ ನ್ಯಾಯಾಲಯದ ಹೊಸ ಅಧಿಕಾರ ವ್ಯಾಪ್ತಿಯನ್ನು ಸುಸ್ಥಾಪಿಸಿರುವುದಿಲ್ಲ. ಆದರೆ, ಅದರ ಪ್ರಾದೇಶಿಕತೆಯೊಳಗೆ ಉದ್ಭವಿಸಿದ ವ್ಯಾಜ್ಯ ಕಾರಣವಾಗಿದ್ದಲ್ಲಿ ರಾಜ್ಯದ ಸರಹದ್ದುಗಳನ್ನು ಮೀರಿದ ಅಧಿಕಾರವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಭಾರತ ಸಂವಿಧಾನದ 226 ನೇ ಅನುಚ್ಛೇಧದ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಉಚ್ಚ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ಸಂವಿಧಾನದ (42ನೇ ತಿದ್ದುಪಡಿ) ಅಧಿನಿಯಮ, 1976ನ್ನು ತೀಕ್ಷ್ಣವಾಗಿ ಮೊಟಕುಗೊಳಿಸಲಾಗಿದೆ. ಆದಾಗ್ಯೂ, ಭಾರತ ಸಂವಿಧಾನದ (44ನೇ ತಿದ್ದುಪಡಿ) 1978ರ ಮೂಲಕ, ಉಚ್ಚ ನ್ಯಾಯಾಲಯಗಳ ಅಧಿಕಾರಗಳನ್ನು, ಗಣನೀಯವಾಗಿ ಪುನಃ ಸ್ಥಾಪಿಸಲಾಗಿದೆ. ಸದರಿ ಅನುಚ್ಛೇಧದ ಖಂಡ (1ಎ)ನ್ನು, ಸಂವಿಧಾನದ (42ನೇ ತಿದ್ದುಪಡಿ) ಅಧಿನಿಯಮ, 1976 ರ ಮೂಲಕ ಖಂಡ (2) ರಂತೆ ಮರು ಅಂಕೆಗೊಳಿಸಲಾಗಿದೆ.

2. ಎಐಆರ್ 1953 ಎಸ್‌ಸಿ 210

5. ಸಿವಿಲ್ ಪ್ರಕ್ರಿಯಾ ಸಂಹಿತೆಯ ಪ್ರಕರಣದ 20(ಸಿ) ರಲ್ಲಿ ಉಪಯೋಗಿಸಲಾದ ಪದಾವಳಿ ಮತ್ತು ಭಾರತ ಸಂವಿಧಾನದ 226 ನೇ ಅನುಚ್ಛೇಧದ ಖಂಡ (2) ರಲ್ಲಿನ ಪದಾವಳಿಯ ಅರ್ಥವು ಒಂದೇ ಆಗಿದ್ದು, ಸಂಹಿತೆಯ 20(ಸಿ) ಪ್ರಕರಣದಲ್ಲಿ ನೀಡಲಾದ ಅರ್ಥವಿವರಣೆಯು, ಈ ರಿಟ್ ಅರ್ಜಿಗೆ ಅನ್ವಯಿಸತಕ್ಕದ್ದು.

6. ***ಓಂ ಪ್ರಕಾಶ್ ಶ್ರೀವಾಸ್ತವ –ವಿರುದ್ಧ– ಭಾರತ ಸರ್ಕಾರ ಮತ್ತು ಇನ್ನೊಬ್ಬರು***[3] ರ ಪ್ರಕರಣದಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯವು ಭಾರತ ಸಂವಿಧಾನದ 226 ನೇ ಅನುಚ್ಛೇಧದ ಅಡಿಯಲ್ಲಿ ಅರ್ಜಿಯನ್ನು ದಾಖಲು ಮಾಡುವುದಕ್ಕಾಗಿ ಉಚ್ಚ ನ್ಯಾಯಾಲಯದ ಪ್ರಾದೇಶಿಕ ಪರಿಮಿತಿಗಳೊಳಗೆ ಉದ್ಭವಿಸಿದ್ದು, ಇಡೀ ಅಥವಾ ಭಾಗಶಃ ವ್ಯಾಜ್ಯ ಕಾರಣವಾಗಿರಲಿ ಅಥವಾ ಇಲ್ಲದಿರಲಿ, ಭಾರತ ಸಂವಿಧಾನದ 226ನೇ ಅನುಚ್ಛೇಧದ ಅಡಿಯಲ್ಲಿನ ವ್ಯವಹರಣೆಗಳ ಸ್ವರೂಪ ಮತ್ತು ಲಕ್ಷಣಗಳ ಹಿನ್ನೆಲೆಯಲ್ಲಿ ತೀರ್ಮಾನಿಸಬಹುದು. ಅರ್ಜಿಯನ್ನು ಸಮರ್ಥಿಸಿಕೊಳ್ಳಲು, ಅರ್ಜಿದಾರನು, ಅವನಿಂದ ಕ್ಲೇಮು ಮಾಡಲಾದ ಕಾನೂನು ಹಕ್ಕನ್ನು, ಮೇಲ್ನೋಟಕ್ಕೆ, ಅತಿಲಂಘಿಸಿರಲಿ ಅಥವಾ ಬೆದರಿಕೆ ಹಾಕಿರಲಿ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಪ್ರತ್ಯರ್ಜಿದಾರರಿಂದ ಅತಿಲಂಘಿಸಿರಬಹುದಾದ ಮತ್ತು ಹಾಗೆ ಅತಿಲಂಘನೆಯು, ವಾಸ್ತವಿಕ ಹಾನಿ ಅಥವಾ ಅದರ ಬೆದರಿಕೆಯುನ್ನುಂಟು ಮಾಡುವ ಮೂಲಕ ನಡೆದಿದೆಯೆಂಬುದನ್ನು ಸಾಬೀತು ಪಡಿಸಬೇಕಾಗುತ್ತದೆ.

7. ***ಕುಸುಮ್ ಇನ್‌ಗಾಟ್ಸ್ ಮತ್ತು ಅಲಾಯ್ಸ್ ಲಿಮಿಟೆಡ್ –ವಿರುದ್ಧ– ಭಾರತ ಸರ್ಕಾರ ಮತ್ತು ಇನ್ನೊಬ್ಬರು***[4] ರ ಪ್ರಕರಣದಲ್ಲಿ, ಭಾರತ ಸಂವಿಧಾನದ 226(2)ನೇ ಅನುಚ್ಛೇಧದಲ್ಲಿ ಉಪಯೋಗಿಸಿದ ಅಭಿವ್ಯಕ್ತಿಗಳ ದೃಷ್ಟಿಯನ್ನುಟ್ಟುಕೊಂಡು, ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಗೆ ಕೂಡಿಬರುವ ವ್ಯಾಜ್ಯಕಾರಣದ ಕೊಂಚ ಭಾಗವಾಗಿದ್ದರೂ ಸಹ ನಿರ್ವಿವಾದವಾಗಿದ್ದು, ಉಚ್ಚ ನ್ಯಾಯಾಲಯ, ಆ ವಿಷಯದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದೆಂದು ಅಭಿಪ್ರಾಯಪಟ್ಟಿದೆ.

3. (2006) 6 ಸ.ನ್ಯಾ.ಪ್ರ. 207
4. (2004) 6 ಸ.ನ್ಯಾ.ಪ್ರ. 254
5. (2000) 7 ಸ.ನ್ಯಾ.ಪ್ರ. 640

8. ***ನವೀನ್ ಚಂದ್ರ ಎನ್. ಮಜಿತಿಯಾ –ವಿರುದ್ಧ– ಮಹಾರಾಷ್ಟ್ರ ಸರ್ಕಾರ ಮತ್ತು ಇತರರು*** [5] ರ ಪ್ರಕರಣದಲ್ಲಿ, ಬಾಂಬೆ ಉಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿರುವುದನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಎತ್ತಿಹಿಡಿದಿದ್ದು ಶಿಲ್ಲಾಂಗ್, ಮೇಘಾಲಯ ಸರ್ಕಾರದಲ್ಲಿ ನೊಂದಾಯಿಸುವ ಪ್ರಥಮ ಮಾಹಿತಿ ವರದಿಯ ಸಂಬಂಧದಲ್ಲಿ ಭಾರತ ಸಂವಿಧಾನದ 226ನೇ ಅನುಚ್ಛೇಧದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ್ದು, ಸದರಿ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಉದ್ಭವಿಸಿದ ವ್ಯಾಜ್ಯಕಾರಣ ಭಾಗವಾಗಿದೆಯೆಂದು ಅಭಿಪ್ರಾಯಪಟ್ಟಿದೆ.

9. ರವಾನೆ ಸರಕುಗಳನ್ನು, ದೆಹಲಿ ಏರ್ ಕಾರ್ಗೋ ಕಾಂಪ್ಲೆಕ್ಸ್‌ನಲ್ಲಿ ರಿಟ್ ಅರ್ಜಿದಾರನಿಂದ ಸ್ವೀಕರಿಸಲಾಗಿದೆ. ಸೀಮಾ ಸುಂಕಗಳ ಮಂಡಲಿಯಿಂದ ಸ್ಪಷ್ಟೀಕರಣ ಪಡೆದ ತರುವಾಯ, ದೆಹಲಿಯಲ್ಲಿರುವ ಪ್ರಾಧಿಕಾರಿಗಳಿಂದ ಅವುಗಳನ್ನು ಬಿಡುಗಡೆಗೊಳಿಸಿದ್ದಾರೆ. ರವಾನೆ ಸರಕುಗಳನ್ನು ಯಾವುದೇ ಆಕ್ಷೇಪವಿಲ್ಲದೇ ಸದರಿ ಅಧಿಸೂಚನೆಯಲ್ಲಿ ನಮೂದಿಸಲಾದಂತೆ ಸುಂಕಗಳನ್ನು ಅಂಗೀಕರಿಸಿದ ಮೇಲೆ ಸ್ವದೇಶದಲ್ಲಿನ ಬಳಕೆಗಾಗಿ ಬಿಡುಗಡೆ ಮಾಡಲಾಗಿದೆ. ಉತ್ತರಾಖಂಡಕ್ಕೆ ಈ ಚಿನ್ನದ ಅದಿರುಗಟ್ಟಿಗಳನ್ನು ರಿಟ್ ಅರ್ಜಿದಾರನಿಂದ ರವಾನಿಸಲಾಗಿದೆ. ಹಡಗಿನ ಸರಕುಗಳನ್ನು ಸಂಸ್ಕರಿಸಲಾಗಿದೆ ಮತ್ತು ಸಂಸ್ಕರಿಸಲಾದ ಚಿನ್ನದ ಗಟ್ಟಿಗಳನ್ನು ಮಾರಾಟ ಮತ್ತು ಚಿನ್ನಾಭರಣ ತಯಾರಿಕೆಗಾಗಿ ಉತ್ತರಾಖಂಡದಿಂದ ಬೆಂಗಳೂರಿಗೆ ತರಲಾಗಿದೆ. ಹಾಗೇ ಮುಕ್ತಾಯವಾಗಿರುವ ನಿರ್ಧರಣೆಯ ಸಂಬಂಧದಲ್ಲಿ ಸದರಿ ನೋಟೀಸುಗಳನ್ನು ದಿನಾಂಕ ಮೇ 29, 2013 ಮತ್ತು ಜೂನ್ 18, 2013ನ್ನು ಬೆಂಗಳೂರು ವಿಳಾಸದಲ್ಲಿರುವ ರಿಟ್ ಅರ್ಜಿದಾರನಿಗೆ ಕಳುಹಿಸಲಾಗಿದೆ. ಬೆಂಗಳೂರಿನಲ್ಲಿರುವಂತೆ ಆ ನೋಟೀಸುಗಳನ್ನು ಸ್ವೀಕರಿಸಿರುವುದು, ವಿವಾದಿತವಲ್ಲ. ರಿಟ್ ಅರ್ಜಿಯಲ್ಲಿರುವಂತೆ, ರಿಟ್ ಅರ್ಜಿದಾರನು ಪ್ರತ್ಯರ್ಜಿದಾರರ ಒತ್ತಾಯದ ಕ್ರಮಗಳನ್ನು ಜರುಗಿಸುತ್ತಿರುವುದಾಗಿ ದಿನಾಂಕ ಜೂನ್ 18, 2013 ನೋಟೀಸ್‌ನ್ನು ರದ್ದುಪಡಿಸುವಂತೆ ಕೋರಿದ್ದಾನೆ. ಭಾರತ ಸಂವಿಧಾನದ 226ನೇ ಅನುಚ್ಛೇಧದ ಅಡಿಯಲ್ಲಿ ಅಧಿಕಾರವ್ಯಾಪ್ತಿಯನ್ನು, ಉಚ್ಚ ನ್ಯಾಯಾಲಯದ ಪ್ರಾದೇಶಿಕ ಅಧಿಕಾರ

ವ್ಯಾಪ್ತಿಯೊಳಗೆ ಉದ್ಭವಿಸಿದ ವ್ಯಾಜ್ಯಕಾರಣದ ಕೊಂಚ ಭಾಗವಾಗಿದ್ದರೂ ಸಹ ಕೋರಬಹುದು. ಮೇಲಿನ ಹಿನ್ನಲೆಯ ವಿರುದ್ಧ, ಈ ನ್ಯಾಯಾಲಯದ ಸನ್ಮಾನ್ಯ ನ್ಯಾಯಾಧೀಶರು ರಿಟ್ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂಬ ಅಭಿಪ್ರಾಯವನ್ನು ಎತ್ತಿಹಿಡಿಯುವುದು ಕಷ್ಟವಾಗುತ್ತದೆ.

10. ಮೇಲೆ ಹೇಳಲಾದ ***ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮೀಷನ್ –ವಿರುದ್ಧ– ಉತ್‌ಪಾಲ್ ಕುಮಾರ್ ಬಸು ಮತ್ತು ಇತರರು*** ಪ್ರಕರಣದ ಮೇಲೆ ಅವಲಂಬಿಸಿದ್ದು, ತಪ್ಪಾಗಿದ್ದು, ಭಾರತ ಸಂವಿಧಾನದ 226ನೇ ಅನುಚ್ಛೇಧದ ಖಂಡ (2) ರಂತೆ ಆ ಪ್ರಕರಣದಲ್ಲಿ ಪರಿಗಣನೆಗಾಗಿ ಬರುವುದಿಲ್ಲ.

11. ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು, ಆದ್ದರಿಂದ, ರದ್ದುಗೊಳಿಸಲಾಗಿದೆ. ರಿಟ್ ಅರ್ಜಿಯನ್ನು, ಅದರ ಮೂಲ ಸಂಖ್ಯೆಯಲ್ಲಿ ವಾಪಸ್ಸು ಇಡಲಾಗಿದೆ ಮತ್ತು ದಾಖಲುಮಾಡಲಾಗಿದೆ.

12. ಶೀಘ್ರವಾಗಿ ಆ ರಿಟ್ ಅರ್ಜಿಯ ಸರದಿ ಪಟ್ಟಿಯ ವಿಲೆಗಾಗಿ ಸನ್ಮಾನ್ಯ ನ್ಯಾಯಾಧೀಶರನ್ನು ನಾವು ಕೋರುತ್ತೇವೆ.

13. ಹಾಗಾಗಿ, ಮೇಲೆ ಇದರಲ್ಲಿ ಸೂಚಿಸಲಾಗಿರುವಂತೆ ಈ ಅಪೀಲನ್ನು ಅಂಗೀಕರಿಸಲಾಗಿದೆ.

ನಾವು ವೆಚ್ಚಗಳಿಗೆ ಸಂಬಂಧಿಸಿದಂತೆ ಆದೇಶ ಮಾಡಿಲ್ಲ.

---